ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 06-06-2020ರಂದು ನಡೆಸಲಾದ ಸಭೆಯ ನಡವಳಿಗಳು

ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/09 /20-21

ಸ್ವಯಂ ಪ್ರೇರಿತ ನಿರ್ಣಯ: (SUO-MOTO)

ವಿಷಯಃ Provinding and fixing chainlink fencing to abandoned Kogilu Quarry in ward No: 05, Jakkur.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಶ್ರೀ. ಮುನೀಂದ್ರ ಕುಮಾರ್.ಕೆ.ಎ. ಆಡಳಿತ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ದಿನಾಂಕ: 05-06-2020ರಂದು ನೀಡಿರುವ ಮನವಿ ಪತ್ರದಲ್ಲಿ ವಿವರಿಸಿರುವಂತೆ,** ವಾರ್ಡ್: 05ರ ಕೋಗಿಲು ಗ್ರಾಮದ ಸರ್ವೆ ನಂ: 99ರಲ್ಲಿ ಗೋಮಾಳ ಜಾಗದಲ್ಲಿ 5-00 ಎಕರೆ / ಗುಂಟೆ ಪ್ರದೇಶದಲ್ಲಿ ಕಲ್ಲುಬಂಡೆ ಇದ್ದು, ಈ ಕಲ್ಲುಬಂಡೆಯು ಶಿಥಿಲಗೊಂಡಿರುವುದರಿಂದ ಪಾಲಿಕೆಯ ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಸರ್ಕಾರದಿಂದ ಹಸ್ತಾಂತರ ಮಾಡಲಾಗಿರುತ್ತದೆ.

ಸದರಿ ಜಾಗದಲ್ಲಿ ಅನಧಿಕೃತವಾಗಿ ಕಸವನ್ನು ಸುರಿಯುತ್ತಿದ್ದು, ಹಾಗೂ ಅತಿಕ್ರಮಣ ಮಾಡುತ್ತಿರುವುದು ಕಂಡುಬಂದಿರುವುದರಿಂದ ತುರ್ತಾಗಿ ಸದರಿ ಪ್ರದೇಶಕ್ಕೆ ತಂತಿ ಬೇಲಿ ಅಳವಡಿಸಿ ಸಂರಕ್ಷಣೆ ಮಾಡಲು ತುಂಬಾ ಅವಶ್ಯಕವಾಗಿರುವುದರಿಂದ 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ0607 ಅಡಿಯಲ್ಲಿ ರೂ. 90.00 ಲಕ್ಷಗಳಿಗೆ 005-19-000001 ಜಾಬ್ ಸಂಖ್ಯೆ ಪಡೆಯಲಾಗಿದ್ದು, ಕಾಮಗಾರಿಯನ್ನು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ. ಎಸ್.ಕೆ.ಕೇಶವಮೂರ್ತಿ ರವರಿಗೆ ದಿನಾಂಕ: 29-11-2018ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)ಪಿಆರ್/394/2018-19, ದಿನಾಂಕ:04-10-2018ರ ಪ್ರಕಾರ ಅಂದಾಜು ಮೊತ್ತ ರೂ. 1.00 ಕೋಟಿವರೆಗಿನ ಶೇಕಡ 15.00 ರಷ್ಟು ವರೆಗಿನ ಟೆಂಡರ್ ಪ್ರೀಮಿಯಂ ನೀಡಲು ಮುಖ್ಯ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿರುವಂತೆ E-Procurement ಮೂಲಕ ಟೆಂಡರ್ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಸದರಿ ಕಾಮಗಾರಿಯ ಪ್ರಸ್ತುತ 2018-19ನೇ ಸಾಲಿನ ದರಗಳ ಪಟ್ಟಿಗೆ ಹೋಲಿಕೆ ಮಾಡಿದಂತೆ ರೂ. 98,62,867.82ಗಳಾಗಿದ್ದು ಇದರ ಮೇಲೆ ಶೇಕಡ 9.03 ರಷ್ಟು ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಲಾಗಿರುವಂತೆ ಒಟ್ಟು ಟೆಂಡರ್ ಮೊತ್ತ ರೂ. 1,07,53,790.41ಗಳಾಗಿರುತ್ತದೆ.

ಪಾಲಿಕೆಯ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯು ಅತಿಕ್ರಮಣ ಕಾರಣದಿಂದ ಸಂರಕ್ಷಿಸಲು ತುರ್ತಾಗಿ ತಂತಿಬೇಲಿ ಅಳವಡಿಸಲು ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಕೈಗೊಂಡಿರುವುದರಿಂದ ಸದರಿ ಕಾಮಗಾರಿ ಟೆಂಡರ್ ಮೊತ್ತ ರೂ. 1,07,53,790.41 ಗಳಿಗೆ ಸಮಿತಿಯ ಸ್ಥಿರೀಕರಣ ನೀಡಲು ಕೋರಿರುತ್ತಾರೆ.

ಶ್ರೀ. ಮುನಿಂದ್ರ ಕುಮಾರ್, ಆಡಳಿತ ಪಕ್ಷದ ನಾಯಕರು, ಬೃ.ಬೆಂ.ಮ.ನ.ಪಾಲಿಕೆ ರವರು ಕೋರಿಕೊಂಡಿರುವಂತೆ, ವಿಷಯದ ಸಂಬಂಧವಾಗಿ ನಿಯಮಾನುಸಾರ ಪರಿಶೀಲನೆಗೆ ಒಳಪಟ್ಟು ಸದರಿ

ಕಾಮಗಾರಿ ಟೆಂಡರ್ ಮೊತ್ತ ರೂ. 1,07,53,790.41 ಗಳನ್ನು ಸ್ಥಿರೀಕರಿಸುವುದೆಂದು ಸಮಿತಿಯ ತೀರ್ಮಾನಿಸಿತು.

ಕ್ರ ಸಂ.	ಹೆಸರು ಮತ್ತು ಪದನಾಮ		ಸಹಿ
1	ಮೋಹನ್‌ಕುಮಾರ್	ಅಧ್ಯಕ್ಷರು	
2	ಎ.ಸಿ.ಹರಿಪ್ರಸಾದ್	ಸದಸ್ಯರು	
3	ಡಿ.ಪ್ರಮೋದ್	ಸದಸ್ಯರು	
4	ಚಂದ್ರಕಲಾ ಗಿರೀಶ್ ಲಕ್ಕಣ್ಣ	ಸದಸ್ಯರು	Chandrakala Girish
5	ಡಿ.ಜಿ.ತೇಜಸ್ವಿನಿ ಸೀತಾರಾಮಯ್ಯ	ಸದಸ್ಯರು	
6	ಪಲ್ಲವಿ .ಸಿ.	ಸದಸ್ಯರು	pallavi c.
7	ಕುಮಾರಿ ಪಳನಿಕಾಂತ್	ಸದಸ್ಯರು	
8	ಸರಳ ಸಿ.ಮಹೇಶ್‌ಬಾಬು	ಸದಸ್ಯರು	Sarala.C
9	ಹೆಚ್.ಎ.ಕೆಂಪೇಗೌಡ	ಸದಸ್ಯರು	
10	ಪಳನಿ ಅಮ್ಮಾಳ್.ವಿ.	ಸದಸ್ಯರು	V. Palaniammal
11	ಕೆ.ವಿ.ರಾಜೇಂದ್ರ ಕುಮಾರ್	ಸದಸ್ಯರು	